ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. **685/2022**

ಸಿ ಡಬ್ಲ್ಯ್ಯೂ–**2**

ಪಿ ಡಬ್ಲ್ಯ್ಯೂ– **2**

ದಿಃ07–10–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಮಂಜುನಾಥ ನಾಯ್ಕ

ತಂದೆಯ ಹೆಸರುಃ ಮನೋಹರ್

ವಯಸ್ಸುಃ **33** ವರ್ಷ

ಉದ್ಯೋಗಃ ಕೂಲಿ

ವಿಳಾಸಃ ವಜ್ರಳ್ಳಿ, ಅಂಕೋಲಾ

<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ</u>

ನನಗೆ ಚಾಸಾ–3 ನಮ್ಮ ಊರಿನವರು. ದಿಃ19–07–2022 ರಂದು ನಾನು ಗುಳ್ಳಾಪುರದಿಂದ ಮಾರುಕಟ್ಟೆಯಿಂದ ಬರುವಾಗ ದುಗ್ಗನಬೈಲ್ ಹತ್ತಿರ ಕಂಟೇನರ್ ವಾಹನವು ಅಶೋಕ ಲೆ ಲ್ಯಾಂಡ್ ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ಅಶೋಕ ಲ್ಯೇಲ್ಯಾಂಡ್ ವಾಹನದ ಚಾಲಕ ಮೃತಪಟ್ಟಿರುತ್ತಾನೆ. ನನಗೆ ವಾಹನಗಳ ಸಂಖ್ಯೆ ನೆನಪಿರುವುದಿಲ್ಲ. ನಾನು ಸಾಕ್ಷಿಯಾಗಿ ಸಹಿಯನ್ನು ಹಾಕಿರುತ್ತೇನೆ. ಸುಮಾರು ಬೆಳಿಗ್ಗೆ 9.30 ಗಂಟೆಗೆ ಸಹಿಯನ್ನು ಹಾಕಿರುತ್ತೇನೆ. ಸಾಕ್ಷಿಯು ನಿಪಿ–2 ರ ಮೇಲಿರುವ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಪೊಟೋವನ್ನು ತೆಗೆದುಕೊಂಡಿರುತ್ತಾರೆ. ನಿಪಿ–3 ಮತ್ತು 4 ಪೊಟೋಗಳನ್ನು ಸಾಕ್ಷಿಯು ಗುರುತಿಸುತ್ತಾರೆ. 2–3 ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಕಚ್ಚಾ ನಕಾಶೆ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ–6 ಮತ್ತು ಸಹಿಯನ್ನು ನಿಪಿ–6 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

ಅಪಘಾತಪಡಿಸಿದ ಕಂಟೇನರ್ ವಾಹನದ ಸಂಖ್ಯೆ ಕೆ ಎ 01 ಎ ಎಲ್ 4176 ಆಗಿತ್ತು ಎಂದರೆ ಸಾಕ್ಷಿಯು ಕಂಟೇನರ್ ವಾಹನವನ್ನು ನೋಡಿದ್ದು, ಆದರೆ ಸಂಖ್ಯೆ ಅಷ್ಟು ಸರಿಯಗಿ ನೆನಪಿರುವುದಿಲ್ಲ, ಆಗಿರಬಹುದು. ಅಪಘಾತಕ್ಕೆ ಒಳಪಟ್ಟ ಅಶೋಕ ಲೆ ಲ್ಯಾಂಡ್ ವಾಹನ ಸಂಖ್ಯೆಃ ಕೆ ಎ 31 ಎ 0905 ಆಗಿತ್ತು ಎಂದರೆ ಸರಿ. ನಾನು ಸಾಕ್ಷಿಯಾಗಿ ಪಂಚನಾಮೆಯ ಕಾಲದಲ್ಲಿ ಪಂಚನಾಮೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ಪಂಚನಾಮೆಯನ್ನು ಮಧ್ಯಾಹ್ನ 1.30 ರಿಂದ 2.45 ಗಂಟೆಯವರೆಗೆ ನಡೆದಿದ್ದು, ಆ ಸಮಯದಲ್ಲಿ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ನನಗೆ ಸರಿಯಾಗಿ ನೆನಪಿರುವುದಿಲ್ಲ, ಆಗಿರಬಹುದು. ಪಂಚನಾಮೆಯನ್ನು ಮಾಡುವ ಸಂದರ್ಭದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿದ್ದು, ಅದಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿ. ಸದರಿ ವಿಷಯಕ್ಕೆ ಸಬಂಧಪಟ್ಟು ಪೊಟೋಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆಗೆ ಎಂದು ಗೊತ್ತಾಗದೆಯೇ ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಅಪಘಾತಕ್ಕೆ ಒಳಪಟ್ಟ ವಾಹನಗಳು ಅಲ್ಲಿಯೇ ಇದ್ದವು ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟು ಸಹ ಪಂಚನಾಮೆಯನ್ನು ಜರುಗಿಸಲಾಯಿತು ಎಂದರೆ ಸರಿ.

ಪಾಟೀ ಸವಾಲನ್ನು ಆರೋಪಿತ ಪರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.